ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಈ ಗ್ರಾಮಗಳಲ್ಲಿ ಮಳೆಗಾಲದಲ್ಲಿಯೂ ಕೂಡ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆಪ್ಪೇ ಅಲ್ಲ ೧–೨ ಕಿ.ಮೀ. ದೂರದಪರೆಗೆ ಈ ಗ್ರಾಮಸ್ಥರು ಹೋಗಿ ನೀರನ್ನು ತರುತ್ತಿದ್ದಾರೆ. ಖಿಲಕಂ ಗ್ರಾಮದಲ್ಲಿ ನೀರಿನ ಮಟ್ಟವೇ ಸಿಕ್ಕಿಲ್ಲ. ಕಳೆದ ೪ ವರ್ಷದಿಂದ ನೀರನ್ನು ಹುಡುಕಾಡುತ್ತಿದ್ದಾರೆ. ಇದಕ್ಕೆ ಬದಲಾಗಿ ಯಾವ ಭಾಗದಲ್ಲಿ ನೀರು ಸಿಗುತ್ತದೆಂಬುದನ್ನು ನೋಡಿ ಅಲ್ಲಿಂದ ಪೈಪುಗಳನ್ನು ಎಳೆದು ನೀರನ್ನು ಏತಕ್ಕೆ ಸರಬರಾಜು ಮಾಡಬಾರದು ? ಈ ಯೋಜನೆಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರೈಸುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಪ್ರತಿವರ್ಷವೂ ನಾನು ಕೇಳುತ್ತಿರುವ ಪ್ರಶ್ನೆಗೆ ಇದೇ ಉತ್ತರ ಸಿಕ್ಕುತ್ತಿದೆ. ಬರುತ್ತಿರುವ ಬೇಸಿಗೆಯಲ್ಲಿ ಈ ಗ್ರಾಮಗಳಿಗೆ ನೀರಿನ ಬವಣೆಯನ್ನು ನಿಗಿಸಲು ತಕ್ಷಣ ಅಂದರೆ ಇನ್ನು ೫–೬ ದಿನಗಳಲ್ಲಿ ವಾಹನಗಳ ಮುಖಾಂತರ ನೀರನ್ನು ಸರಬರಾಜು ಮಾಡಿ ಈ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

ಶ್ರೀ ಎಂ. ವೈ ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ೨ ಹಳ್ಳಿಗಳಿಗೆ ಸಂಬಂಧಪಟ್ಟ ವಿವರಗಳನ್ನು ಕೊಟ್ಟರೆ, ಈ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನೀಲಹಳ್ಳಿಯಲ್ಲಿರುವ ಜನಸಂಖ್ಯೆ ೭೮೫. ಅಲಿಳಿ ಬೋರ್‌ವೆಲ್‌ಗಳು, ಒಂದು ಮಿನಿವಾಟರ್ ಸಪ್ಲೈ ಸ್ಕೀಂ ಇದೆ. ತಲಾ ಪ್ರಮಾಣ ೫೦ ಲೀಟರ್ ನೀರನ್ನು ನಮ್ಮ ಲೆಕ್ಕದ ಪ್ರಕಾರ ಕೊಡುವುದಕ್ಕೆ ಸಾಧ್ಯವಿದೆ. ಇದರ ಜೊತೆಗೆ ಇನ್ನೂ ಒಂದು ಪೈಪ್ಡ್ ವಾಟರ್ ಸ್ಕೀಂನ್ನೂ ಕೂಡ ಮಾಡುತ್ತಿದ್ದೇವೆ. ಈ ಪೈಪ್ಡ್ ವಾಟರ್ ಸ್ಕೀಂನಲ್ಲಿ ಬೇಸಿಗೆಯಲ್ಲಿ ನೀರು ಕಡಿಮೆಯಾಗುತ್ತದೆ. ಆದ್ದರಿಂದ ಇದರ ಜೊತೆಗೆ ಇನ್ನೂ ಒಂದು ಸೋರ್ಸ್‌ನ್ನು ಹುಡುಕುವ ಪ್ರಯತ್ನವನ್ನು ನಮ್ಮ ಇಂಜಿನಿಯರ್‌ಗಳು ಮಾಡಿ ಒಂದು ಬೋರ್‌ವೆಲ್ ಗನ್ನು ಹುಡುಕುತ್ತಿದ್ದಾರೆ. ಅದು ೪ ಕಿ.ಮೀ. ದೂರದಲ್ಲಿದೆ, ಅದರಲ್ಲಿ ೧೧,೭೨೦ ಲೀಟರ್ ಪರ್ ಹೆಡ್ ಸಿಕ್ಕುತ್ತಿದೆ. ಅಲ್ಲಿಂದ ಪೈಪ್ ಹಾಕುವ ಕೆಲಸವನ್ನು ಸಧ್ಯದಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ಏಪ್ರಿಲ್ ತಿಂಗಳೊಳಗೆ ಇನ್ನೂ ಹೆಚ್ಚಿನ ಪೈಪ್ ವಾಟರ್‌ನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಿದ್ದುದು. ಹೊಸಹಳ್ಳಿಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ ಈಗ ೨೫ ಲೀಟರ್ ಪರ್‌ಹೆಡ್ ಕೊಡುವ ೩ ಬೋರ್‌ವೆಲ್‌ಗಳಿವೆ. ಒಂದು ಮಿನಿವಾಟರ್ ಸಪ್ಲೈ ಸ್ಕೀಂ ಕೂಡ ಇದೆ. ಅದರೂ ಕೂಡ ಬೇಸಿಗೆಯಲ್ಲಿ ನೀರಿಗೆ ತೊಂದರೆಯಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲೂ ಕೂಡ ಹೊಸ ಸೋರ್ಸ್‌ಸ್ ಹುಡುಕುವ ಪ್ರಯತ್ನದಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇದೂ ಕೂಡ ೪ ಕಿ.ಮೀ. ದೂರದಲ್ಲಿ ೧೧,೭೨೦ ಲೀಟರ್ ಪರ್ ಹೆಡ್‌ನ ಒಂದು ಸೋರ್ಸ್ ಸಿಕ್ಕಿದೆ. ಇದರ ಪೈಪ್‌ಲೈನ್ ಕೆಲಸವನ್ನು ಜೆ. ಆರ್. ವೈ ಯೋಜನೆಯ ಅಡಿಯಲ್ಲಿ ಹಾಕುವ ಕೆಲಸಮಾಡುತ್ತಿದ್ದಾರೆ. ಇದೂ ಕೂಡ ಇದೇ ವರ್ಷದ ಏಪ್ರಿಲ್ ತಿಂಗಳೊಳಗೆ ನೀರನ್ನು ಕೊಡುತ್ತೇವೆಂದು ಹೇಳಿದ್ದೇವೆ. ಇನ್ನೂ ಎರಡು ಕಡೆಗಳಲ್ಲಿ ನೀರನ್ನು ಕೊಡುವ ಯೋಜನೆ ಇದೆ. ಅದು ಬಹುಶಃ ಜೂನ್ ಅಥವಾ ಜುಲೈ ತಿಂಗಳಲ್ಲಿ ಆಗಬಹುದು. ಈಗ ನಾವು ನೀರನ್ನು ಕೊಟ್ಟಿದ್ದೇವೆ, ಕೊಡುತ್ತಿದ್ದೇವೆ, ಇನ್ನೂ ಹೆಚ್ಚಿನ ನೀರನ್ನು ಕೊಡಲು ಪ್ರಯತ್ನ ಮಾಡುತ್ತಿದ್ದೇವೆ. ಯಾವುದೇ ಸರ್ಕಾರವೂ ಕೂಡ ಇದಕ್ಕಿಂತ ಹೆಚ್ಚಿನ ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಹೊಸಹಳ್ಳಿ, ಖಿಲ್‌ಕಂ, ಕೃಷ್ಣಾಪುರ್, ತೊಲಮಾಮಿಡಿ ಈ ಗ್ರಾಮಗಳಲ್ಲಿ ನೀರಿನ ವ್ಯವಸ್ಥೆ ಇಲ್ಲವೇ ಇಲ್ಲ. ಸ್ನಾನಕ್ಕೆ ಕುಡಿಯುವುದಕ್ಕೆ ನೀರಿಲ್ಲದೆ ೧–೨ ಕಿ.ಮೀ. ದೂರದಿಂದ ಆ ಗ್ರಾಮಸ್ಥರು ನೀರನ್ನು ತರುತ್ತಿದ್ದಾರೆ. ತಾವು ಬೇಕಾದರೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಳ್ಳಿ. ಆದ್ದರಿಂದ ಈಗ ಕೂಡಲೇ ಅಲ್ಲಿಗೆ ವಾಹನಗಳ ಮೂಲಕ ನೀರನ್ನೊದಗಿಸುವ ವ್ಯವಸ್ಥೆ ಮಾಡಲೇಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ವರದಿಯನ್ನು ತರಿಸಿಕೊಂಡು ಕೂಡಲೇ ಈ ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡಿ. ಈ ಜನರು ನೀಲಹಳ್ಳಿ ಗ್ರಾಮದ ಸಮೀಪಕ್ಕೆ ಬಂದು ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದೇ ಪ್ರಕಾರ ಕೃಷ್ಣಾಪುರ, ತೊಲಮಾಮಿಡಿ, ಅಳ್ಳಳ್ಳಿ ಜನ ಕೂಡ ತೊಂದರೆ ಪಡುತ್ತಿದ್ದಾರೆ.

ಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಕಿಷ್ಣಾಪುರ ಎಂದು ಹೇಳಿದಲ್ಲಾ, ಅಲ್ಲಿಯೂ ಕೂಡ ನೀರು ಇದೆ ಆದರೆ ಒಬ್ಬರು ಪೈಪೈಟ್‌ನವರು ಸಪ್ಲೈಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ೩–೪ ಹಳ್ಳಿಗಳಿಗೆ ತಕ್ಷಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳುತ್ತಿದ್ದಾರೆ, ತಾವು ಆ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಿ.

ರಾಜ್ಯದಲ್ಲಿ ವಿಫಲವಾದ ಕೊಳವೆ ಬಾವಿಗಳು

೩೧೩. (೮೫೪) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ). —ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ರಾಜ್ಯದಲ್ಲಿ ಕೆಟ್ಟಿರುವ ಜಿಲ್ಲಾ ಪರಿಷತ್ ವ್ಯಾಪ್ತಿಯ ಕೊಳವೆ ಬಾವಿಗಳೆಷ್ಟು ?

ಆ) ಅವುಗಳನ್ನು ರಿಪೇರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಜನವರಿ ೯೪ರ ಅಂತ್ಯದವರೆಗೆ ೧೯೦೭ ಕೊಳವೆ ಬಾವಿಗಳು ಕೆಟ್ಟಿರುತ್ತವೆ.

ಆ) ಕೈಪಂಪು ಕೂಡಿಸಿರುವ ಕೊಳವೆ ಬಾವಿಗಳ ನಿರ್ವಹಣೆಯು ಈಗ ಹೊಸ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್ ೧೯೯೩ರ ಪ್ರಕಾರ ಗ್ರಾಮ ಪಂಚಾಯತಿಗಳಿಗೆ ಸೇರಿರುತ್ತದೆ. ಇವುಗಳಿಗೆ ಪ್ರತಿ ತಾಲ್ಲೂಕಿನಲ್ಲಿರುವ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಬೆಂಬಲ ನೀಡುತ್ತವೆ.

ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಆಯ್ಕೆಯಾಗಿ ಕೈಪಂಪುಗಳ ಭಾಗವನ್ನು ದುರಸ್ತಿ ಮಾಡಲು ತರಬೇತಿ ಪಡೆದ ರಕ್ಷಕರು ಇರುತ್ತಾರೆ.

ತಾಲ್ಲೂಕಿನಲ್ಲಿರುವ ರಕ್ಷಕರು ಯಾಂತ್ರಿಕರ ಕೈಮೀರಿದ ಪಕ್ಷದಲ್ಲಿ, ತಾಲ್ಲೂಕಿನ ಕೇಂದ್ರ ಕಛೇರಿಯಲ್ಲಿರುವ ಸಂಚಾರಿ ವಾಹನದ ಸಹಾಯದಿಂದ ದುರಸ್ತಿ ಮಾಡಲಾಗುತ್ತಿದೆ.

ಸರ್ಕಾರವು ನೀರು ಸರಬರಾಜು ಯೋಜನೆಗಳ ನಿರ್ವಹಣೆಗೆ, ನೈರ್ಮಲೀಕರಣಕ್ಕೆ ಮತ್ತು ವಿದ್ಯುತ್ ಖರ್ಚಿಗೋಸ್ಕರ ಪ್ರತಿ ಗ್ರಾಮ ಪಂಚಾಯತಿಗೂ ಒಂದು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಪ್ರಕಾರ ಜನವರಿ ೯೪ರ ಅಂತ್ಯದವರೆಗೆ ೧೯೦೭ ಕೊಳವೆ ಬಾವಿಗಳು ಕೆಟ್ಟಿವೆ ಎಂದು ಹೇಳಿದ್ದಾರೆ. ನನಗೆ ಅನಿಸುತ್ತದೆ ಇನ್ನು ಜಾಸ್ತಿ ಕೆಟ್ಟಿರತಕ್ಕಂಥ ಅಂಕಿಅಂಶಗಳು ಸಿಕ್ಕಿಲ್ಲವೆಂದು ಕಾಣಿಸುತ್ತದೆ, ಬಹುಶಃ ತಾವು ಅದನ್ನು ಸಮಗ್ರವಾಗಿ ಚಿಂತನೆ ಮಾಡಬೇಕು ಎಂದು. ಎರಡನೆಯದು ಇದನ್ನು ರಿಪೇರಿ ಮಾಡುವುದಕ್ಕಾಗಿ ಈಗತಾನೇ ಚುನಾಯಿತರಾಗಿ ಆಯ್ಕೆಯಾಗಿರತಕ್ಕಂಥ ಪಂಚಾಯಿತಿ ಗ್ರಾಮಪಂಚಾಯಿತಿಗಳಿಗೆ ವಹಿಸುತ್ತೇವೆಂದು ಹೇಳುತ್ತಿದ್ದೀರಿ. ಗ್ರಾಮಪಂಚಾಯಿತಿಗೆ ಈಗ ಅಧಿಕಾರವನ್ನು ಕೊಟ್ಟಿದ್ದೀರಾ ಮತ್ತು ಅಧ್ಯಕ್ಷರು ಯಾವತ್ತಿನಿಂದ ಕೆಲಸ ಮಾಡಬೇಕು ? ಆ ಗ್ರಾಮ ಪಂಚಾಯಿತಿ ಕಾರ್ಯಾಲಯಗಳು ಎಲ್ಲೆಲ್ಲಿ ಇವೆ. ಅವು ಯಾವುವು ಆಗಿಲ್ಲ. ಗ್ರಾಮಪಂಚಾಯಿತಿಯ ಕಾರ್ಯಾಲಯ ಎಲ್ಲಿ, ಅಧ್ಯಕ್ಷರ ಕಾರ್ಯವ್ಯಾಪ್ತಿ ಏನು? ಅಧ್ಯಕ್ಷರು ಎಲ್ಲಿ ಕುಳಿತುಕೊಳ್ಳಬೇಕು ಅದೆಲ್ಲಾ ವ್ಯವಸ್ಥೆ ಇನ್ನೂ ಆಗಿಲ್ಲ. ಆದ್ದರಿಂದ ಕೊಟ್ಟಿರತಕ್ಕಂಥ ಕೊಳವೆ ಬಾವಿಗಳಿಗೆ ಅವರು ರಿಪೇರಿ ಮಾಡುವುದಕ್ಕಿಂಥ ಮೊದಲಾಗಿ ತರಾತುರಿಯಿಂದ ತುತ್ತಾಗಿ ಸರ್ಕಾರವೇ ಇದಕ್ಕೆ ಒಂದು ಏಜೆನ್ಸಿಯನ್ನು ನಿರ್ಮಾಡಿಸಿ ಮಾಡಬೇಕು. ಏಕೆಂದರೆ ಈಗ ಬೇಸಿಗೆಯ ಕಾಲ. ಸುಮಾರು ಮೂರು ತಿಂಗಳಿನಿಂದಲೂ ಅಪಾರವಾದಂಥ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಈ ಕೊಳವೇ ಬಾವಿಗಳನ್ನು ರಿಪೇರಿ ಮಾಡತಕ್ಕಂಥ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಏನು ಸಾಧ್ಯ ಅದನ್ನು ನಾವು ಮಾಡಲಿಕ್ಕೆ ಸಿದ್ಧರಾಗಿದ್ದೇವೆ. ಈಗ ಮೈಸೂರು ಜಿಲ್ಲೆಯಲ್ಲಿ ೧೧೨೮ ಕೊಳವೆ ಬಾವಿಗಳನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಹತ್ತರಲ್ಲಿ ಒಂದು ಭಾಗ ರಿಪೇರಿ ಮಾಡುವ ಅವಶ್ಯಕತೆ ಇದ್ದೇ ಇರುತ್ತದೆ. ಇಲ್ಲಿ ಸ್ವಲ್ಪ ಜಾಸ್ತಿ ಇರಬಹುದು ಅದಕ್ಕೆ ೧೯೦೭ ಎಂದು ಹೇಳಿದರು. ಈ ರಿಪೇರಿ ಕೆಲಸ ತಾವಾಗಿ ಗೊತ್ತಿರುವ ಹಾಗೆ ಎರಡು ಹಂತದಲ್ಲಿ ಆಗುತ್ತದೆ. ಒಂದೇನೆಂದರೆ ಮಂಡಲ್ ಪಂಚಾಯತ್‌ಗಳಿಗೆ ಕೊಟ್ಟಿರತಕ್ಕಂಥ ಒಂದು ಜವಾಬ್ದಾರಿ. ಅಂಥದ್ದೇ ಜವಾಬ್ದಾರಿ ನಮ್ಮ ಹೊಸ ಕಾನೂನಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿದ್ದೇವೆ. ಮತ್ತೆ ಅದೆಲ್ಲದೆ ಕೇರ್‌ಟೇಕರ್ಸ್ ಮಾಡುವಂಥ ವ್ಯವಸ್ಥೆ ಇದೆ. ಇಷ್ಟೆಲ್ಲಾ ಮಾಡಿ ಕೂಡ ರಿಪೇರಿ ಮಾಡಲಿಕ್ಕೆ ಆಗದಿದ್ದರೆ ಒಂದು ಮೊಬೈಲ್ ಯೂನಿಟ್‌ನ್ನು ತಾಲ್ಲೂಕು ಮಟ್ಟದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿ ಹಳ್ಳಿಹಳ್ಳಿಗೂ ಹೋಗಿ ಅವನ್ನು ರಿಪೇರಿ ಮಾಡಲಿಕ್ಕೆ ಸಹಾಯ ಮಾಡಬೇಕು. ನಮ್ಮ ಲೆಕ್ಕದ ಪ್ರಕಾರ ಒಂದು ಬಾವಿ ರಿಪೇರಿಗೆ ಇದೆಲ್ಲಾ ಸೇರಿಸಿದರೆ ಗ್ರಾಮ ಮಟ್ಟದ

ಜವಾಬ್ದಾರಿ, ಜಿಲ್ಲಾ ಮಟ್ಟದ ಜವಾಬ್ದಾರಿ ಮತ್ತು ಸಪೋರ್ಟಿಂಗ್ ಎಂಜಿನೀಯರಿಂಗ್ ಸ್ಟಾಫ್ ಸೇರಿಸಿದರೆ ನಾಲ್ಕುನೂರು ರೂಪಾಯಿಗಳಿಂದ ಆರುನೂರು ರೂಪಾಯಿಗಳವರೆಗೂ ವಿಚಾರ್ಜಾಗುತ್ತದೆ. ಬೇಸಿಗೆ ಬರುತ್ತಿದೆ, ಮಾನ್ಯ ಸದಸ್ಯರು ಹೇಳಿಕತಕ್ಕಂಥ ವಿಷಯ ಸರಿಯಿದೆ. ನಾವು ಆದೇಶ ಕೊಟ್ಟು ಆದಷ್ಟು ಬೇಗ ಎಲ್ಲೆಲ್ಲಿ ರಿಪೇರಿಯ ಅವಶ್ಯಕತೆ ಇರುತ್ತದೆ ಅಲ್ಲಿ ನಾವು ಮಾಡಬೇಕೆಂದರೆ ಅಲ್ಲಿ ಮೊಬೈಲ್ ವ್ಯಾನ್, ಯೂನಿಟ್ಸ್ ಏನಿದೆ ಅದನ್ನು ಸ್ವಲ್ಪ ಚುರುಕುಗೊಳಿಸಬೇಕು. ನಾವು ಗ್ರಾಮ ಮಟ್ಟದಲ್ಲಿ ರಿಪೇರಿ ಮಾಡಲಿಕ್ಕೆ ಕಾಯಬೇಕಾದ್ದಿಲ್ಲ. ನಾವು ಈ ಮೊಬೈಲ್ ಯೂನಿಟ್ಸನ್ನು ಒಂದೇ ತಿಂಗಳಲ್ಲಿ ಪ್ರತಿಯೊಂದು ಕಡೆಗೂ ಹೋಗಿ ಎಲ್ಲೆಲ್ಲಿ ರಿಪೇರಿಯ ಆವಶ್ಯಕತೆ ಇದೆ ಅಲ್ಲಿ ತಕ್ಷಣ ಮಾಡಿಬಿಡಿ ಎಂದು ಹೇಳುವುದರಲ್ಲಿ ಏನೂ ತೊಂದರೆ ಇರುವುದಿಲ್ಲ. ಅದು ಒಳ್ಳೆಯ ಸೂಚನೆಯಿದೆ ಅದರ ಪ್ರಕಾರ ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇನ್ನೊಂದು ತಮ್ಮಲ್ಲಿ ಕೇಳತಕ್ಕಂಥದ್ದು ಈಗ ಕೆಟ್ಟಿರತಕ್ಕಂಥ ಕೊಳವೇ ಬಾವಿಗಳ ರಿಪೇರಿಗೆ ತಾವು ಮೊಬೈಲ್ ವ್ಯಾನ್ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿರುವಿರಿ. ಕಂಪ್ಲೀಟ್ ನೀರೇ ಬರದಿರತಕ್ಕಂಥ ಕಡೆ ಅನೇಕ ಕೊಳವೆ ಬಾವಿಗಳು ಇದಾವೆ. ನೀರೇ ಇಲ್ಲ, ಬಾವಿ ತೆಗೆದರು ನೀರೇ ಬರಲಿಲ್ಲ. ಕೆಲವಲ್ಲಿ ೬ ತಿಂಗಳು ನೀರು ಬಂತು ಆಮೇಲೆ ಕೆಟ್ಟು ಹೋಯಿತು. ಅಂಥದ್ದು ಅನೇಕ ಕಡೆ ಸಾವಿರಾರು ಕಡೆ ಈ ಕೊಳವೇ ಬಾವಿಗಳ ಪರಿಸ್ಥಿತಿಯಾಗಿರುತ್ತದೆ. ಅದರ ಬದಲಿಯಾಗಿ ಹೊಸದಾಗಿ ಬಾವಿಗಳನ್ನು ತೆಗೆಯಲಿಕ್ಕೆ ತಾವು ವಿಶೇಷವಾದಂಥ ಅನುದಾನವನ್ನು ಬಿಡುಗಡೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ತಮಗೆ ಗೊತ್ತಿರುವ ಹಾಗೆ ಇದಕ್ಕೆ ಹಣದ ಅಭಾವವಂತೂ ಇಲ್ಲ. ರಿಗ್ ಮೆಷಿನ್ಸ್ ಸಾಕಷ್ಟು ನಮ್ಮ ರಾಜ್ಯದಲ್ಲಿ ಇದೆ. ಈಗ ರಿಗ್ ಮೆಷಿನ್ಸ್‌ನ್ನು ಎಲ್ಲಿ ಸೋರ್ಸ್ ಸಿಕ್ಕಿಲ್ಲ ಅಥವಾ ಅದರ ಅವಶ್ಯಕತೆ ಬಹಳ ಇದೆ, ನಿಮ್ಮ ತಾಲ್ಲೂಕ್ಕಿನಲ್ಲಿ ಇಂಥ ಕಡೆ ಇದೆ ಎಂದು ಪಟ್ಟಿಮಾಡಿ ಆ ರಿಗ್ ಮೆಷಿನ್ಸ್‌ನ್ನು ತಕ್ಷಣ ಒಂದು ಪ್ರೋಗ್ರಾಮ್ ಪ್ರಕಾರ ಹೋಗಿ ಒಂದು ಹೊಸ ಪಾಯಿಂಟ್ಸ್ ಹುಡುಕುವ ಕೆಲಸವನ್ನು ತಾವು ಮಾಡಿಸಬೇಕು. ಇದು ನನ್ನಿಂದ ಇಲ್ಲಿ ಕುಳಿತುಕೊಂಡು ಮಾಡಲಿಕ್ಕೆ ಆಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿರುವುದು ಪಂಚಾಯತ್‌ರಾಜ್ಯ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ವ್ಯವಸ್ಥೆ ಇದ್ದರೆ ಇವೆಲ್ಲಾ ಕೆಲಸಗಳಿಗೆ ನಮಗೆ ಸಹಾಯವಾಗುತ್ತದೆ. ಯಾರೇ ಮಂತ್ರಿಗಳಾಗಿರಲಿ ಅವರು ಬೆಂಗಳೂರಿನಲ್ಲಿ ಕುಳಿತುಕೊಂಡು ಪ್ರತಿಯೊಂದು ವಿಷಯಕ್ಕೂ ಇಲ್ಲಿಂದಲೇ ಆದೇಶವನ್ನು ಕೊಡತಕ್ಕಂಥದ್ದು ಎಂದರೆ ಬಹಳ ಕಷ್ಟವಾಗುತ್ತದೆ. ಆದರೂ ಕೂಡ ಇಷ್ಟರಲ್ಲೇ ಪಂಚಾಯತ್ ರಾಜ್ ವ್ಯವಸ್ಥೆ ನಮ್ಮ ಕರ್ನಾಟಕದಲ್ಲಿ

ಬರುತ್ತದೆಂದು ನಾನು ನಂಬಿದ್ದೇನೆ. ಅಲ್ಲಿಯವರೆಗೂ ಶಾಸಕರು ಮತ್ತು ಅಧಿಕಾರಿಗಳು ಒಂದಾಗಿ ಯಾವ ಯಾವ ಹಳ್ಳಿಯಲ್ಲಿ ನೀರಿನ ಅಭಾವ ಇದೆ ಎಂಬುದನ್ನು ಪಟ್ಟಿ ಮಾಡಿ ತಕ್ಷಣ ಕಳುಹಿಸಿದರೆ ಚೀಫ್ ಇಂಜಿನಿಯರ್‌ಗೆ ಕೂಡ ಹೇಳುತ್ತೇನೆ. ಅಲ್ಲಿ ಬೋರಿಂಗ್ ಮೆಷಿನ್ ಕಳುಹಿಸಿ ನೀರು ಹುಡುಕುವ ಪ್ರಯತ್ನ ಮಾಡಬಹುದು. ನೀರು ಸಿಕ್ಕಿದರೆ ನೀರು ಕೊಡಬಹುದು. ಎಷ್ಟೋಕಡೆ ನೀರು ಸಿಗುವುದಿಲ್ಲ. ನೀರು ಹುಡುಕುವುದಕ್ಕೆ ತಾಂತ್ರಿಕವಾಗಿ ಒಂದು ಪದ್ಧತಿ ಇದೆ. ಅದರ ಪ್ರಕಾರ ಮಾಡಿದರೂ ಕೂಡ ಎಷ್ಟೋ ಕಡೆ ನೀರು ಸಿಗುವುದಿಲ್ಲ. ನೀರಿನಮಟ್ಟ ಎಲ್ಲಾ ಬೋರ್‌ವೆಲ್‌ಗಳಲ್ಲಿ ಕೆಳಗೆ ಹೋಗುತ್ತಿದೆ. ಬೇಸಿಗೆ ಬಂದಾಗ ನಮಗೆಲ್ಲಾ ಭಯವಾಗುತ್ತದೆ ಬಹಳಷ್ಟು ಕೆಳಗೆ ಹೋಗಿಬಿಟ್ಟರೆ ಮುಂದೆ ಗತಿ ಏನು ಎಂದು. ಆದಕಾರಣ ಬೋರ್‌ವೆಲ್ ಇವತ್ತು ೧ ಲಕ್ಷ ೩೫ ಸಾವಿರ ಏನು ನಾವು ಮಾಡಿದ್ದೇವೆ ಅದನ್ನು ಡಬ್ಬಲ್ ಮಾಡುವ ಪ್ರಯತ್ನ ಮಾಡುವುದರಲ್ಲಿ ಅಷ್ಟು ಅರ್ಥ ಸಮಂಜಸವಾಗಿಲ್ಲ. ಏಕೆಂದರೆ ಡಬ್ಬಲ್ ಮಾಡಿದರೂ ಕೂಡ ನೀರು ಅಷ್ಟೇ ಇರುವುದಾದರೆ ನಾವು ಏನು ಮಾಡಿದಂತಾಗುತ್ತದೆ ? ಆದಕಾರಣ ಯಾವ ಯಾವ ಹಳ್ಳಿಗಳಲ್ಲಿ ೫-೧೦ ಬೋರ್‌ವೆಲ್‌ಗಳನ್ನು ಹಾಕಿದರೂ ಕೂಡ ಮಿನಿ ವಾಟರ್‌ಸಪ್ಲೈ ಮಾಡಿದರೂ ಕೂಡ ನೀರು ಸಿಗದೇ ಇದ್ದರೆ ಆಮೇಲೆ ಬೇರೆ ಎಲ್ಲಿ ಸೋರ್ಸ್ ಇದೆ ಅಲ್ಲಿಂದ ನೀರು ತರುವ ಪ್ರಯತ್ನ ಮಾಡಲೇ ಬೇಕು. ಬೇಸಿಗೆಯಲ್ಲಿ ಲಾರಿಯಿಂದ ನೀರು ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಕರ್ನಾಟಕದ ಎಷ್ಟೋ ಹಳ್ಳಿಗಳಲ್ಲಿ ನಾವು ಮಾಡಿದ್ದೇವೆ. ಶಾಸಕರು ಪರಿಹಾರ ಹುಡುಕಬೇಕಾದರೆ ನೀವು ಸೋರ್ಸ್ ಹುಡುಕಬೇಕು. ನೀವು ಅದರಲ್ಲಿ ಆಸಕ್ತಿ ತೋರಿಸಿ ಸೋರ್ಸ್ ಹುಡುಕಿ ನನಗೆ ಹೇಳಿದರೆ ತಕ್ಷಣ ಪೈಪ್ ಹಾಕಿ ನಾನು ಹಳ್ಳಿಗೆ ನೀರು ತೆಗೆದುಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ ನೀವು ಎಲ್ಲ ಪ್ರಯತ್ನ ಮಾಡಿದರೂ ಕೂಡ ಕೆಳಗಡೆ ಸಾಕಷ್ಟು ಸೋರ್ಸ್ ನಮಗೆ ಸಿಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಮ್ಮ ತಾಲ್ಲೂಕ್ ಒಂದರಲ್ಲೇ ೩೧೨ ಕೊಳವೆಬಾವಿಗಳು ನೀರಿಲ್ಲದೆ ಪೂರ್ತಿ ಹೋಗಿವೆ. ಎಲ್ಲಿ ನೀರು ಸಿಗುತ್ತದೆ ಎಂಬುದನ್ನು ವಿಜ್ಞಾನಿಗಳ ಹತ್ತಿರ ಸಂಬಂಧ ಪಟ್ಟವರ ಹತ್ತಿರ ಕೇಳುತ್ತೇನೆ. ತಾವು ಅದಕ್ಕೆ ಅನುದಾನ ಬಿಡುಗಡೆ ಮಾಡುವ ಭರವಸೆ ಕೊಡಬೇಕು. ಹೊಸ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ೩೦೦ ಕೊಳವೆ ಬಾವಿಗಳಿಗೆ ನಾನು ಸ್ಥಳಗಳನ್ನು ಕೊಡುತ್ತೇನೆ. ದಯವಿಟ್ಟು ತಾವು ಸದನದಲ್ಲಿ ಚಾಮರಾಜನಗರ ತಾಲ್ಲೂಕಿಗೆ ಹಣ ಕೊಡುವ ಭರವಸೆ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಹೋದ ವರ್ಷ ೧೦೮ ಕೋಟಿ ಇದ್ದರೆ ಈ ವರ್ಷ ೧೨೫ ಕೋಟಿ ಇದೆ. ಹಣದ ಪ್ರಶ್ನೆ ಇಲ್ಲ. ನೀರು ಸಿಗುವ ಪ್ರಶ್ನೆ ಇದು.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಭರವಸೆ ಪ್ರಕಾರ ನಾನು ಪತ್ರ ಬರೆಯುತ್ತೇನೆ. ಸ್ಥಳ ತೋರಿಸುತ್ತೇನೆ. ದಯವಿಟ್ಟು ತಾವು ಮಾಡಿಸಿಕೊಡಬೇಕು.

ಚಿಕ್ಕನಾಯಕನ ಹಳ್ಳಿಯಲ್ಲಿ ಡಿ. ಪಿ. ಎ. ಪಿ. ಯೋಜನೆ

೧೯೯ (೬೯೨) ಶ್ರೀ ಟಿ ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕನಾಯಕನಹಳ್ಳಿ ಮತ್ತು ತಿರಾ ತಾಲ್ಲೂಕುಗಳಲ್ಲಿ ಡಿಪಿಎಪಿ ಯೋಜನೆಯನ್ವಯ ೧೯೮೦ರ ಸಾಲಿನಲ್ಲಿಯೇ ಅಂಬಾರಪುರ ಮತ್ತು ಮಾರನದು ಏತ ನೀರಾವರಿ ಹಾಗೂ ಸಲುಪರಹಳ್ಳಿ ಮತ್ತು ಮಂಗನಹಳ್ಳಿಯಲ್ಲಿ ಕೆರೆಗಳನ್ನು ನಿರ್ಮಾಣ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದು ನಿಜವೇ ?

ಆ) ಆ ಕೆಲಸಗಳು ಅರೆಬರೆಯಲ್ಲಿ ಸ್ಥಗಿತವಾಗಿದ್ದು, ಅನೇಕ ಬಾರಿ ಜಿಲ್ಲಾ ವರಿಷ್ಟರ ಗಮನಕ್ಕೆ ತಂದಿದ್ದರೂ ಸಹ ಇದುವರೆಗೂ ಕೆಲಸವನ್ನು ಪ್ರಾರಂಭಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಸಾಲಿನಲ್ಲಾದರೂ ಕೆಲಸವನ್ನು ಸಂಪೂರ್ಣಗೊಳಿಸಲಾಗುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ೧೯೮೦ನೇ ಸಾಲಿನಲ್ಲಿ ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಅಂಬಾರಪುರ ಮತ್ತು ಮಾರನದು ಗ್ರಾಮಗಳನ್ನು ಏತ ನೀರಾವರಿ ಕಾಮಗಾರಿಗಳನ್ನು ಹಾಗೂ ಸಲುಪರಹಳ್ಳಿ ಗ್ರಾಮದಲ್ಲಿ ಕೆರೆ ಕಾಮಗಾರಿಯನ್ನು ತೆಗೆದುಕೊಂಡಿದ್ದು ನಿಜ' ಆದಾಗ್ಯೂ ಮಂಗನಹಳ್ಳಿ ಗ್ರಾಮದ ಕೆರೆ ಕೆಲಸದ ಕಾಮಗಾರಿಯನ್ನು ಆ ವರ್ಷದಲ್ಲಾಗಲೀ ಅಥವಾ ಮುಂದಿನ ವರ್ಷದಲ್ಲಾಗಲೀ ತೆಗೆದುಕೊಂಡಿರುವುದಿಲ್ಲ.

ಆ) ಮೊದಲನೆಯ ೩ ಕಾಮಗಾರಿಗಳು ಅಂದರೆ, ಅಂಬಾರಪುರ ಮತ್ತು ಮಾರನದು ಏತ ನೀರಾವರಿ ಹಾಗೂ ಸಲುಪರಹಳ್ಳಿ ಕೆರೆ ಕೆಲಸ ಅರ್ಧಕ್ಕೆ ಸ್ಥಗಿತವಾಗಿದ್ದು ನಿಜ.

ಇ) ಎರಡು ಏತ ನೀರಾವರಿ ಯೋಜನೆಗಳ ಕಾಮಗಾರಿಗಳು ೧೯೯೪-೯೫ನೇ ಸಾಲಿನಲ್ಲಿ ಪೂರ್ಣಗೊಳ್ಳುವುವು. ಸಲುಪರಹಳ್ಳಿ ಕೆರೆಯ ನಿರ್ಮಾಣವು ತಾಂತ್ರಿಕವಾಗಿ ಸಾಧುವಲ್ಲವೆಂದು ಕಂಡುಬಂದಿರುವುದರಿಂದ ತೆಗೆದುಕೊಂಡಿರುವುದಿಲ್ಲ. ಮಂಗನಹಳ್ಳಿ ಕೆರೆ ನಿರ್ಮಾಣದ ಯೋಚಿತ ಕಾಮಗಾರಿಯ ಪ್ರದೇಶವು ಅಬ್ಕಾರಿ ಇಲಾಖೆಗೆ ಸೇರಿದ್ದಾಗಿರುತ್ತದೆ. ಹಾಗೂ ಅಬ್ಕಾರಿ ಇಲಾಖೆಯ ಸದರಿ ಪ್ರದೇಶವನ್ನು ಜಿಲ್ಲಾ ಪಂಚಾಯತ್ ವಶಕ್ಕೆ ವಹಿಸಿದಲ್ಲಿ, ಈ ಕೆರೆ ನಿರ್ಮಾಣದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಟಿ. ಬಿ. ಜಯಚಂದ್ರ.—ಸಭಾಧ್ಯಕ್ಷರೇ, ನನ್ನ ಮೂಲ ಪ್ರಶ್ನೆಗೆ ಉತ್ತರವಾಗಿ ಅಂಬಾರಪುರ ಸಲುಪರಹಳ್ಳಿ ಮತ್ತು ಮಂಗನಹಳ್ಳಿ ಕೆರೆಗಳ ಕೆಲಸ ಅರ್ಧಕ್ಕೆ ಸ್ಥಗಿತವಾಗಿರುವುದು ನಿಜ ಎಂಬ ಮಾತನ್ನು ಹೇಳಿದ್ದಾರೆ. ಅದು ಪ್ರಾರಂಭವಾಗಿದ್ದು ೧೯೮೦ರಲ್ಲಿ. ಇವತ್ತಿನವರೆಗೂ ಕೆಲಸ ಆಗಿಲ್ಲ.